ಆದುದರಿಂದ ಇದಕ್ಕೆಲ್ಲಾ ಕಾಯಿದೆ ಇರುವುದರಿಂದ ನಾನು ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಆದೇ ರೀತಿಯಲ್ಲಿ ಮಾನ್ಯ ನೇಗಿಯಾವರ ಬಗ್ಗೆಯೂ ಹೇಳಿದ್ದಾರೆ. ಅದರ ಬಗ್ಗೆಯೂ ಪರಿಶೀಲಿಸುತ್ತೇನೆಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಅವರು ಹೇಳುವುದು ಯಾವುದು ರೆಕಾರ್ಡ್‌ಗೆ ಹೋಗಬಾರದು ಇದನ್ನು ಬೇಕಾದರೆ ಅರ್ಧಗಂಟೆಕಾಲದ ಚರ್ಚೆಗೆ ತೆಗೆದುಕೊಳ್ಳಲು ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ನಾನು ಹೇಳಿರುವ ವಿಷಯದ ಬಗ್ಗೆ ತನಿಖೆ ಮಾಡುವ ಇಚ್ಛೆ ಇದ್ದಲ್ಲಿ ತಮ್ಮ ಇಲಾಖೆಯ ಮೂಲಕ ತನಿಖೆ ಮಾಡಿಸಿ ಇಂಥ ಅನೇಕ ಪ್ರಕರಣಗಳು ಶಾಸಕರ ಗಮನಕ್ಕೆ ಬಂದಿರುವುದಿಲ್ಲ ಇಂತಹ ಹಲವಾರು ಪ್ರಕರಣಗಳು ಇವೆ ಆದ್ದರಿಂದ ಇದನ್ನು ಪಿಎಸಿ ಮೂಲಕ ತನಿಖೆ ಮಾಡಿಸಿ ಎಂದು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ನಾನು ತನಿಖೆ ಮಾಡಿಸಲು ಅಸಮರ್ಥನಾದರೆ ಪಿಎಸಿ ಮೂಲಕ ತನಿಖೆ ಮಾಡಿಸಲು ಕಳುಹಿಸಿಕೊಡುತ್ತೇನೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನದ ಹಕ್ಕು ಪತ್ರ ನೀಡುವ ಬಗ್ಗೆ

೩೦೬೪. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ವಸತಿ ಮಂತ್ರಿ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನದ ಹಕ್ಕು ಪತ್ರ ನೀಡುವುದಕ್ಕೆ ಮೊದಲು ಒದಗಿಸಬೇಕಾದ ಮೂಲಭೂತ ಸೌಲಭ್ಯಗಳನ್ನು ಬನಶಂಕರಿ ೩ನೇ ಘಟ್ಟಕ್ಕೆ ಸೇರಿದ ಶ್ರೀನಿವಾಸನಗರ ಬಡಾವಣೆಯ ಸರ್ವೆ ನಂಬರ್ ೮ ರಿಂದ ೧೪ರ ವರೆಗಿನ ಗೇರ ಹಳ್ಳಿ ಪ್ರದೇಶದಲ್ಲಿ ನಿವೇಶನ ಹಕ್ಕು ಪತ್ರಗಳನ್ನು ೪ ವರ್ಷಗಳ ಹಿಂದೆಯೇ ನೀಡಿದ್ದರೂ ಇದುವರೆವಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿಕೊಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ೧೯೮೬ನೇ ಇಸವಿಯಲ್ಲಿಯೇ ಈ ಪ್ರದೇಶದಲ್ಲಿ ನೀರು ಸರಬರಾಜು ಸೌಲಭ್ಯವನ್ನು ಕಲ್ಪಿಸಿಕೊಡುವ ಸಲುವಾಗಿ ಅಗತ್ಯವಾದ ಹಣವನ್ನು ನೀಡುವಂತೆ ಜಲಮಂಡಲಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಕೇಳಿಕೊಂಡಿರುವುದು ನಿಜವೇ ? ಹಾಗಿದ್ದಲ್ಲಿ ಸದರಿ ಹಣವನ್ನು ಕಟ್ಟಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ಹಣ ಕಟ್ಟದೇ ಇದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಇನ್ನು ಎಷ್ಟು ದಿವಸದ ಒಳಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಜಲಮಂಡಲಿಗೆ ಹಣವನ್ನು ಕಟ್ಟಿ ಮೇಲ್ಕಂಡ ಪ್ರದೇಶಕ್ಕೆ ನೀರು ಸರಬರಾಜು ಸೌಲಭ್ಯವನ್ನು ಒದಗಿಸಿಕೊಡಲು ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು

ಆ) ನೀರು ಸರಬರಾಜು ಸೌಲಭ್ಯ ಒದಗಿಸುವ ಸಲುವಾಗಿ ಬೆಂಗಳೂರು ಜಲಮಂಡಳಿಯಿಂದ ೪೧.೩೦ ಲಕ್ಷ ರೂಗಳಿಗೆ ಅಂದಾಜು ಪಟ್ಟಿ ಬಂದಿದೆ ಈ ಪ್ರದೇಶದ ಭೂ ಮಾಲೀಕರಿಂದ ಸಾಕಷ್ಟು ಠೇವಣಿ ಹಣ ಪಾವತಿಯಾಗಿಲ್ಲದ ಆದುದರಿಂದ ಜಲಮಂಡಳಿಗೆ ಹಣವನ್ನು ಕೊಟ್ಟಿರುವುದಿಲ್ಲ.

ಇ) ಆದಷ್ಟು ಶೀಘ್ರವಾಗಿ ಈ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬನಶಂಕರಿ ೩ನೇ ಘಟ್ಟದಲ್ಲಿರುವ ಶ್ರೀನಿವಾಸ ನಗರ ಮತ್ತು ಗೇರಹಳ್ಳಿ ಬಡಾವಣೆಗಳಲ್ಲಿ ನಿವೇಶನಗಳನ್ನು ಹಂಚಿದ್ದಾರೆ. ಇಲ್ಲಿ ಸುಮಾರು ಐದು ವರ್ಷಗಳಿಂದಲೂ ಒಳಚರಂಡಿ ವ್ಯವಸ್ಥೆ ಮತ್ತು ನೀರುಸರಬರಾಜು ವ್ಯವಸ್ಥೆಯನ್ನು ಮಾಡಿಲ್ಲ. ಅಲ್ಲಿಯ ಜನರು ಸುಮಾರು ಐದು ವರ್ಷಗಳಿಂದಲೂ ತಮ್ಮ ಬೇಡಿಕೆಯನ್ನು ಪ್ರಾಧಿಕಾರದಮುಂದೆ ಇಟ್ಟರೂ ಅವರು ಯಾವ ಕ್ರಮವನ್ನೂ ತೆಗೆದು